# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಗ್ಯಾನಪ್ಪ ಮೂಲಿಮನಿ | ಪ್ರಾ.ಸಾ-8 |
| ತಂದೆಯ ಹೆಸರು | : | ದೇವೇಂದ್ರಪ್ಪ | ಚಾಸಾ-19 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ಚಟ್ನಿಹಾಳ | |

ದಿಃ 07.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾ-1 ಹಾಗೂ ಆತನ ಮನೆಯವರು ನನಗೆ ಗೊತ್ತು. ಮೃತ ಅಲ್ಲಾಸಾಬ ಚಾಸಾ-1 ರವರ ತಮ್ಮ. ಆತನ ಜೆ ಸಿ ಬಿ ಚಾಲಕನಾಗಿ ಕುಕನೂರ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದು, ಆಗಾಗ ಊರಿಗೆ ಬಂದು ಹೋಗುತ್ತಿದ್ದನು. ನ್ಯಾಯಾಲಯದ ಮುಂದಿರುವ ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ಚಾಸಾ-6/ರೇಣುಕಾ 1 ನೇ ಆರೋಪಿತನ ಹೆಂಡತಿ. ನಮ್ಮ ಮನೆಗೂ ಮತ್ತು 1 ನೇ ಆರೋಪಿ ಮನೆಗೂ ಸುಮಾರು 200 ಅಡಿ ಅಂತರ ಇರುತ್ತದೆ.

2. ಈಗ ಅಂದಾಜು 2 ವರ್ಷಗಳ ಹಿಂದೆ ಊಟ ಮಾಡಿ ನಮ್ಮ ಮನೆ ಹತ್ತಿರ ಇರುವ ಶಾಲೆ ಬಳಿ ಸುಮಾರು 10-30 ಗಂಟೆಗೆ ಕುಳಿತಿದ್ದಾಗ, 1 ನೇ ಆರೋಪಿ/ಗ್ಯಾನಪ್ಪ ರವರ ಮನೆಯಿಂದ ಕೂಗಾಟದ ಶಬ್ಧ ಕೇಳಿಬಂದಿತು. ನಾನು ಸದರಿ ಕೂಗಾಟದ ಶಬ್ಧ ಕೇಳಿ 1 ನೇ ಆರೋಪಿ/ಗ್ಯಾನಪ್ಪನ ಮನೆ ಬಳಿ ಭೇಟಿ ನೀಡಿದಾಗ ನ್ಯಾಯಾಲಯದ ಮುಂದಿರುವ ಈ ಪ್ರಕರಣದ ಎಲ್ಲಾ ಆರೋಪಿತರಾದ ಗ್ಯಾನಪ್ಪ, ಚಂದ್ರಪ್ಪ ಹನಮಪ್ಪ ಮತ್ತು ದ್ಯಾವಪ್ಪ ಎಲ್ಲರೂ ಸೇರಿ ಅಲ್ಲಾಸಾಬನನ್ನು ಹೊಡೆಯುತ್ತಿದ್ದರು. 1 ನೇ ಆರೋಪಿ/ಗ್ಯಾನಪ್ಪನ ಕೈಯಲ್ಲಿ ಸಲಾಕೆಯ ಕಾವು, 2 ಮತ್ತು 3 ನೇ ಆರೋಪಿತರ ಕೈಯಲ್ಲಿ ದೊಣ್ಣೆ ಇತ್ತು. ಆ ಸಮಯಕ್ಕೆ

ಅಲ್ಲಾಸಾಬ ರವರ ತಂದೆ/ಚಾಸಾ-10 ರವರು ಆರೋಪಿತರಿಗೆ ಅಲ್ಲಾಸಾಬನಿಗೆ ಬುದ್ಧಿ ಹೇಳುತ್ತೇವೆ ಬಿಟ್ಟು ಬಿಡಿ ಎಂದು ಕೇಳಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಆರೋಪಿತರು ನಿಮ್ಮ ಮನೆ ಹೆಣ್ಣು ಮಕ್ಕಳನ್ನು ಈ ರೀತಿ ಮಾಡಿದರೆ ಸುಮ್ಮನೆ ಬಿಡುತ್ತೀರಾ ಎಂದು ಹೇಳಿದರು. ಅದೇ ಸಮಯಕ್ಕೆ ಪೊಲೀಸ ವಾಹನ ಸ್ಥಳಕ್ಕೆ ಬಂದಿದ್ದು, ಆರೋಪಿತರು ಮನೆ ಬಾಗಿಲನ್ನು ತೆರೆದು ಓಡಿ ಹೋಗಿರುತ್ತಾರೆ. ನಾನು ಒಳಗೆ ಹೋಗಿ ನೋಡಲಾಗಿ ಅಲ್ಲಾಸಾಬ ಮನೆ ಒಳಗೆ ಮೃತಪಟ್ಟಿದ್ದನು. ಈ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ** ಶ್ರೀ. ಎಸ್ ಸಿ ಹೆಚ್ ವಕೀಲರಿಂದ ಆರೋಪಿತರ ಪರ

ನಾನು ಗ್ರಾಮ ಪಂಚಾಯತಿ ಮೆಂಬರ ಆಗಿದ್ದೆ ಎಂದರೆ ಸರಿ. ಆರೋಪಿತರು ಬಿಜೆಪಿ ಪಕ್ಷಕ್ಕೆ ಬೆಂಬಲಿತರು ಎಂದರೆ ನನಗೆ ಗೊತ್ತಿಲ್ಲ. ಅಲ್ಲಾಸಾಬ ಮತ್ತು ಅವರ ಕುಟುಂಬದವರು ಕಾಂಗ್ರೆಸ್ ಬೆಂಬಲಿತರಾಗಿದ್ದು ನನಗೆ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ/ಗ್ಯಾನಪ್ಪನ ಮನೆಯಿಂದ ನಾನು ಕುಳಿತಿದ್ದೆ ಎಂದು ಹೇಳುವ ಶಾಲೆ 200 ಅ.ಡಿ ಅಂತರ ಇರುತ್ತದೆ, ಆದರೆ ಅರ್ಧ ಕಿ.ಮೀ ಅಂತರ ಇರುವುದಿಲ್ಲ. 1 ನೇ ಆರೋಪಿ ಗ್ಯಾನಪ್ಪನ ಮನೆಯಿಂದ ಯಾವುದೇ ಕೂಗಾಟವಾದರೆ ಶಾಲೆಯ ಹತ್ತಿರ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ.

2. ಕೂಗಾಟದ ಶಬ್ಧ ಕೇಳಿ ಗ್ಯಾನಪ್ಪನ ಮನೆ ಹತ್ತಿರ ಹೋದಾಗ ಸುಮಾರು 50 ಜನ ಊರಿನ ಗ್ರಾಮಸ್ಥರು ಸೇರಿದ್ದರು. ನಾವು 1 ನೇ ಆರೋಪಿತನ ಮನೆ ಬಾಗಿಲನ್ನು ಒಡೆದು ಅಲ್ಲಾಸಾಬನನ್ನು ರಕ್ಷಣೆ ಮಾಡಲು ಪ್ರಯತ್ನಿಸಿರುವುದಿಲ್ಲ. ನಾನು ಘಟನೆಯನ್ನು ಮನೆಯ ಕಿಟಕಿಯಿಂದ ನೋಡಿರುತ್ತೇನೆ. ನಾನು ಸ್ಥಳಕ್ಕೆ ಹೋದ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. .

3. ಗ್ಯಾನಪ್ಪನ ಮನೆಯ ಒಳಗೆ ಮೊದಲು ದನಕಟ್ಟುವ ಕೊಟ್ಟಿಗೆ ಇರುತ್ತದೆ ಎಂದರೆ ಸರಿ. ಸದರಿ ದನದ ಕೊಟ್ಟಿಗೆ ಬಹಳ ಸಣ್ಣದಾಗಿರುತ್ತದೆ ಎಂದರೆ ಸಾಕ್ಷಿ ಸುಮಾರಾಗಿರುತ್ತದೆ ಎಂದು ನುಡಿಯುತ್ತಾರೆ. ದನದ ಕೊಟ್ಟಿಗೆಯ ನಂತರ ಪಡಸಾಲೆ ಇರುತ್ತದೆ ಎಂದರೆ ಸರಿ. ಸದರಿ ಪಡಸಾಲೆ ದನದ ಕೊಟ್ಟಿಗೆಯಿಂದ ಸ್ವಲ್ಪ ಎತ್ತರದಲ್ಲಿ ಇರುತ್ತದೆ ಎಂದರೆ ಸರಿ. ನಾವು ಮನೆ ಕಿಟಕಿಯಿಂದ ನೋಡಿದಾಗ ಅಲ್ಲಾಸಾಬ ಮನೆಯಲ್ಲಿ ಬಿದ್ದಿದ್ದ. ನಾವು ಕಿಟಕಿಯಿಂದ ನೋಡಿದಾಗ ಅಲ್ಲಾಸಾಬನ ತಲೆಗೆ ಪೆಟ್ಟಾಗಿ ರಕ್ತ ಬಂದು ಕೆಳಗೆ ಬಿದ್ದಿದ್ದರು. ಅಲ್ಲಾಸಾಬನ ಮನೆಯವರು ಮನೆಯ ಬಾಗಿಲನ್ನು ಒಡೆಯಲು ಪ್ರಯತ್ನಿಸಿರುವುದಿಲ್ಲ. .

4. ಪೊಲೀಸರು ಘಟನಾ ಸ್ಥಳಕ್ಕೆ ಸುಮಾರು 10-30 ರಿಂದ 11 ಗಂಟೆಯವರೆಗೆ ಬಂದಿರುತ್ತಾರೆ. ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ಆರೋಪಿತರು ಮನೆ ಒಳಗೆ ಇದ್ದರು. ಪೊಲೀಸರು ಸ್ಥಳಕ್ಕೆ ಬಂದ ನಂತರ ಆರೋಪಿತರನ್ನು ಹಿಡಿದುಕೊಂಡು ತಮ್ಮ ಜೊತೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸಮಯದಲ್ಲಿ 1 ನೇ ಆರೋಪಿ ಗ್ಯಾನಪ್ಪ, 2 ನೇ ಆರೋಪಿ/ಚಂದ್ರಪ್ಪ ಹಾಗೂ 3 ನೇ ಆರೋಪಿ//ಹನಮಪ್ಪ ನನ್ನು ತಮ್ಮ ಜೊತೆ ಕರೆದುಕೊಂಡು ಹೋಗಿರುತ್ತಾರೆ. ಘಟನೆ ಆದ ಮರುದಿನ ಪೊಲೀಸರು ನನ್ನ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

5. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಾಸಾಬ ಸತ್ತು ಬಿದ್ದಿದ್ದನು ಎಂದರೆ ಸರಿಯಲ್ಲ. ಅಲ್ಲಾಸಾಬ ರವರು ಚಾಸಾ-6 ರವರ ಮೇಲೆ ಅತ್ಯಾಚಾರ ಮಾಡಲು ಹೋದಾಗ ಆತ ಅಲ್ಲಾಸಾಬನನ್ನು ತಳ್ಳಿದಾಗ ಆತನು ದನದಕೊಟ್ಟಿಗೆಯಲ್ಲಿ ಬಿದ್ದು ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚುನಾವಣೆಯಲ್ಲಿ ಆರೋಪಿತರು ನನ್ನ ವಿರುದ್ಧವಾಗಿ ಪ್ರಚಾರ ಮಾಡುತ್ತಾರೆ ಎಂದು ಮತ್ತು ಅಲ್ಲಾಸಾಬ ರವರ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ಕೂಗಾಟದ ಶಬ್ಧ ಕೇಳಿ ಅಲ್ಲಾಸಾಬ ರವರ ಮನೆ ಬಳಿ ಹೋಗಿ ನೋಡಿದಾಗ ಆರೋಪಿತರು ಅಲ್ಲಾಸಾಬನಿಗೆ ಬಡಿಗೆಯಿಂದ ಹಲ್ಲೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಅಲ್ಲಾಸಾಬನ ತಂದೆ/ಚಾಸಾ-10 ರವರು ಆರೋಪಿತರಿಗೆ ಅಲ್ಲಾಸಾಬನಿಗೆ ಬಿಟ್ಟುಬಿಡಿ ಬುದ್ದಿ ಹೇಳುತ್ತೇವೆ ಎಂದು ಹೇಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಹಸನಸಾಬ ನದಾಫ | ಫ್ರಾ.ಸಾ-7 |
| ತಂದೆಯ ಹೆಸರು | : | ಅಲ್ಲಾಸಾಬ | ಚಾಸಾ-17 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ವಕೀಲರು | |
| ವಿಳಾಸ | : | ಹಿರೇಮ್ಯಾಗೇರಿ | |

ದಿಃ 07.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಅಲ್ಲಾಸಾಬ ನನ್ನ ಸೋದರ ಅತ್ತೆಯ ಮಗ. ಆತನ ಊರು ಹುನಗುಂದ ತಾಲೂಕಿನ ಚಟ್ನಿಹಾಳ. ಮೃತ ಅಲ್ಲಾಸಾಬ ಜೆ.ಸಿ.ಬಿ ಚಾಲಕನಾಗಿ ಯಲಬುರ್ಗಾ ತಾಲೂಕಿನ ಕುಕನೂರ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದನು. ಮೃತ ಅಲ್ಲಾಸಾಬ ಆಗಾಗ ತನ್ನ ಊರಿಗೆ ಹೋಗಿಬರುವದು ಮಾಡುತ್ತಿದ್ದನು.

2. ದಿಃ 11.01.2022 ರಂದು ಬೆಳಗಿನಾ ಜಾವ 2 ಗಂಟೆಗೆ ನನ್ನ ಸಹೋದರಿ/ಮಮ್ತಾಜ/ಚಾಸಾ-13 ರವರು ನನಗೆ ಕರೆ ಮಾಡಿ ಅಲ್ಲಾಸಾಬನ ಕೊಲೆ ಆಗಿರುತ್ತದೆ ಎಂದು ವಿಷಯ ತಿಳಿಸಿದರು. ಆಗ ನಾನು ವೇಳೆ ಆಗಿದ್ದರಿಂದ ಬೆಳಿಗ್ಗೆ ಬರುತ್ತೇನೆ ಎಂದು ಹೇಳಿ, ಬೆಳಿಗ್ಗೆ ಸುಮಾರು 9 ಗಂಟೆಗೆ ಚಟ್ನಿಹಾಳ ಗ್ರಾಮಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಾಸಾಬ ಮೃತಪಟ್ಟ ಮನೆ ಹತ್ತಿರ ಹೋಗಿದ್ದು, ಅಲ್ಲಿ ಜನರು ಮತ್ತು ಪೊಲೀಸರು ಸೇರಿದ್ದರು. ನಂತರ ಸದರಿ ಮನೆಯ ಕಿಟಕಿಯಿಂದ ನೋಡಲಾಗಿ ಅಲ್ಲಾಸಾಬನ ಮೃತದೇಹ ಮನೆಯ ಒಳಗೆ ಬಿದ್ದಿತ್ತು.

.2..

3. ನಂತರ ನಾನು ಚಾಸಾ-1 ರವರ ಮನೆಗೆ ಹೋಗಿದ್ದು, ಅವರು ದೂರನ್ನು ಸಲ್ಲಿಸುವುದಾಗಿ ಹೇಳಿದ್ದರಿಂದ ಅವರ ಮನೆಯಲ್ಲಿಯೆ ಚಾಸಾ-1 ರವರು ಹೇಳಿದಂತೆ ದೂರನ್ನು ಗಣಕೀಕೃತ ಮಾಡಿ, ಚಾಸಾ-1 ರವರ ಜೊತೆಗೆ ಇಲಕಲ್ಲನ ಗ್ರಾಮೀಣ ಪೊಲೀಸ ಠಾಣೆಗೆ ಹೋಗಿ ಘಟನೆ ಬಗ್ಗೆ ದೂರನ್ನು ದಾಖಲಿಸಿರುತ್ತೇವೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ** ಶ್ರೀ. ಎಸ್ ಸಿ ಹೆಚ್ ವಕೀಲರಿಂದ ಆರೋಪಿತರ ಪರ

ನಾನು ಕಳೆದ 4 ವರ್ಷಗಳಿಂದ ವಕೀಲಿ ವೃತ್ತಿ ಮಾಡುತ್ತಿದ್ದೇನೆ. ಬೆಳಗಿನ ಜಾವ ಚಾಸಾ-1 ರವರು ನನಗೆ ಕರೆ ಮಾಡಿ ಅಲ್ಲಾಸಾಬ ಮೃತಪಟ್ಟ ವಿಚಾರ ತಿಳಿಸಿದಾಗ ನಾನು ಚಾಸಾ-1 ರವರಿಗೆ ದೂರನ್ನು ದಾಖಲಿಸುವಂತೆ ತಿಳಿಸಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಪೊಲೀಸರು ಅಲ್ಲಾಸಾಬ ಮೃತಪಟ್ಟಿದ್ದ ಮನೆಯ ಒಳಗೆ ಇದ್ದರು. ನಾನು ಸದರಿ ಮನೆ ಒಳಗೆ ಹೋಗಿರುವುದಿಲ್ಲ. ನಿಶಾನೆ ಪಿ-1 ದೂರನ್ನು ಚಾಸಾ-1 ರವರ ಮನೆಯಲ್ಲಿ ಗಣಕೀಕೃತ ಮಾಡಿರುತ್ತೇನೆ. ದೂರನ್ನು ದಾಖಲಿಸಿದ ದಿನವೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನನ್ನ ಹೇಳಿಕೆಯಲ್ಲಿ ಮೃತ ಅಲ್ಲಾಸಾಬ ರವರ ಶವವನ್ನು ಕಿಟಕಿಯಿಂದ ನೋಡಿದ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ನಾನು ಚಟ್ನಿಹಾಳ ಗ್ರಾಮದ ವಾಸಿ ಎಂದು ತಿಳಿಸಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ನನ್ನ ವಿಳಾಸ ಚಟ್ನಿಹಾಳ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಿಶಾನೆ ಪಿ-1 ದೂರನಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. .

.3..

2. ನಾನು ಈ ಪ್ರಕರಣದ ದೂರನ್ನು ಸುಳ್ಳಾಗಿ ತಯಾರು ಮಾಡಿ, ಚಾಸಾ-1 ರವರ ಕಡೆಯಿಂದ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ನಮ್ಮ ಸಂಬಂಧಿಕರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ಎಂದು ಸುಳ್ಳಾಗಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಮತ್ತು ಮೃತ ಅಲ್ಲಾಸಾಬ ನನ್ನ ಸಂಬಂಧಿಕನಾದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.